ಸರಯೂ

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly    May 2014    Vol. :1    Issue : 3    5116/ಜಯ ಸಂ    ವೈಶಾಖ/ಮೇ 2014    ಪುಟಗಳು : 8

## ಉಚಿತ ವೈದ್ಯಕೀಯ ಶಿಬಿರ 10–04–2014



ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್, ಶ್ರೀರಾಮ ಪ್ರಾಥಮಿಕ, ಪ್ರೌಢಶಾಲಾಭಿವೃದ್ಧಿ ಸಮಿತಿ ಹಾಗೂ ಎ.ಜೆ. ವೈದ್ಯಕೀಯ ಕಾಲೇಜು ಆಸ್ಪತ್ರೆ ಮಂಗಳೂರು ಇವರ ಸಹಯೋಗದೊಂದಿಗೆ ಶ್ರೀರಾಮ ವಿದ್ಯಾಕೇಂದ್ರದ ವಠಾರದಲ್ಲಿ ಉಚಿತ ವೈದ್ಯಕೀಯ ಶಿಬಿರ ಏರ್ಪಡಿಸಲಾಗಿದ್ದು, ಇದನ್ನು ಉದ್ಯಮಿ ಪದ್ಮನಾಭ ಪೂಜಾರಿ ಉದ್ಘಾಟಿಸಿ ಶುಭಹಾರೈಸಿದರು.

ದೇಶ ಸಂಪತ್‌ಭರಿತವಾಗಬೇಕಾದರೆ ದೇಶದ ಪ್ರತಿಯೊಬ್ಬ ಪ್ರಜೆಯೂ ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು. ಅದಕ್ಕೆ ಪೂರಕವಾಗುವ ಕಾರ್ಯಕ್ರಮಗಳು ಈ ವಿದ್ಯಾಕೇಂದ್ರದಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ ಅದರ ಸದುಪಯೋಗವನ್ನು ಪಡೆದುಕೊಂಡು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತಾಗಬೇಕು ಎಂದು ಶ್ರೀರಾಮ ವಿದ್ಯಾಕೇಂದ್ರ ಸಂಚಾಲಕ ಡಾ॥ ಪ್ರಭಾಕರ ಭಟ್ ಈ ಸಂದರ್ಭದಲ್ಲಿ ಹೇಳಿದರು.

ಡಾ॥ ಸುಕೇಶ್ ಕೊಟ್ಟಾರಿ ಮತ್ತು ಶ್ರೀಮತಿ ಶ್ರುತಿ ಕೊಟ್ಟಾರಿ, ವೈದ್ಯಾಧಿಕಾರಿ ಡಾ॥ ಸುಜಯ್ ಭಂಡಾರಿ, ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ, ಎ.ಜೆ. ಆಸ್ಪತ್ರೆ ಮಂಗಳೂರು ಇಲ್ಲಿನ ವೈದ್ಯಾಧಿಕಾರಿಗಳು, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪ್ರಭು ಅಮ್ಟೂರು, ಕಾರ್ಯದರ್ಶಿ ಮುತ್ತಪ್ಪ ತುಳಸೀವನ, ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸತೀಶ್ ಶಿವಗಿರಿ ಮೊದಲಾದವರು ಉಪಸ್ಥಿತರಿದ್ದರು.

ಪ್ರಾಥಮಿಕ ಶಾಲಾಭಿವೃದ್ಧಿ ಅಧ್ಯಕ್ಷ ನ್ಯಾಯವಾದಿ ಸತೀಶ್‌ಭಟ್ ಶಿವಗಿರಿ ಸ್ವಾಗತಿಸಿ, ಪ್ರೌಢಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪ್ರಭು ಅಮ್ಟೂರು ವಂದಿಸಿ, ಶಿಕ್ಷಕ ಜಿನ್ನಪ್ಪ ಏಳ್ತಿಮಾರ್ ನಿರೂಪಿಸಿದರು.

250ಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು. ಅವಶ್ಯಕತೆ ಇದ್ದವರಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಶ್ರೀರಾಮ ಭಜನಾ ಮಂದಿರ, ಶ್ರೀ ಗುರೂಜಿ ಸ್ವಸಹಾಯ ಸಂಘ ಕಲ್ಲಡ್ಕ, ಗೆಳೆಯರ ಬಳಗ ಕಾಂಪ್ರಬೈಲು, ಚೈತನ್ಯ ಹಿರಿಯ ವಿದ್ಯಾರ್ಥಿ ಸಂಘ, ಹನುಮಾನ್ ಫ್ರೆಂಡ್ಸ್ ಕಲ್ಲಡ್ಕ, ಗಣೇಶ ಮಂದಿರ ಗೋಳ್ತಮಜಲು, ನೇತಾಜಿ ಯುವಕ ಮಂಡಲ, ಸರ್ವಶ್ರೇಷ್ಠ ಫ್ರೆಂಡ್ಸ್ ಕಲ್ಲಡ್ಕ, ಮಣಿಕಂಠ ಯುವಶಕ್ತಿ ಕುದ್ರೆಬೆಟ್ಟು, ಸುರಕ್ಷಾ ಸಂಗಮ ಪೂರ್ಲಿಪಾಡಿ ಮೊದಲಾದವರು ಸಹಕರಿಸಿದರು.








**ಶಾಲೆ ಸಾಮಾಜಿಕ ಪರಿವರ್ತನೆಯ ಕೇಂದ್ರ ಅದಕ್ಕಾಗಿ ಸಮಾಜ ಮತ್ತು ಶಾಲೆಯ ನಡುವೆ ಸಂಬಂಧ ಸಾಧಿಸುವ ಅನೇಕ ಚಟುವಟಿಕೆಗಳು ಇಲ್ಲಿ ನಡೆಯುತ್ತಿರುತ್ತವೆ. ಅದರಂತೆ ವರ್ಷಕ್ಕೆರೆಡು ಬಾರಿ ಉಚಿತ ವೈದ್ಯಕೀಯ ಶಿಬಿರಗಳು.**

ನಿಶ್ಚಿತ ಗುರಿ ಇದ್ದು, ಅದನ್ನು ಸಾಧಿಸುವಲ್ಲಿ ಎಷ್ಟೇ ಅಡೆತಡೆಗಳು, ಕಷ್ಟ–ನಷ್ಟಗಳು, ಟೀಕೆ ಟಿಪ್ಪಣಿಗಳು ಬಂದರೂ ಅದೆಲ್ಲವನ್ನೂ ಧೈರ್ಯದಿಂದ ಎದುರಿಸೋಣ. ಗುರಿ ಸಾಧನೆಗೆ ಅವಸರಿಸದೆ, ಈ ಎಲ್ಲಾ ಕಷ್ಟಗಳು ನಮ್ಮ ತಾಳ್ಮೆ, ಸಹನೆಯನ್ನು ಹೆಚ್ಚಿಸಿ, ವ್ಯಕ್ತಿತ್ವ ರೂಪಿಸುವಲ್ಲಿ ಒದಗಿ ಬಂದ ಅವಕಾಶಗಳೆಂದುಕೊಳ್ಳೋಣ. ಟೀಕಿಸುವವರ ಮಾತಿಗೆ ಪ್ರತಿಕ್ರಯಿಸಲು ಹೋಗಿ, ಮಾತಿಗೆ ಮಾತು, ಸೇಡಿಗೆ ಸೇಡು, ಏಟಿಗೆ ಎದಿರೇಟು ನೀಡಿ ಕೊನೆಗೆ ಎದುರಾಳಿಗಿಂತಲೂ ನೀಚ ಸ್ಥಿತಿಯಲ್ಲಿ ನಾವಿದ್ದುಬಿಡುತ್ತೇವೆ. ಹಠ ಸಾಧಿಸಲು ಹೋಗಿ ಈಗ ನಾವಿರುವ ಸ್ಥಿತಿಯನ್ನು ಒಪ್ಪಿಕೊಳ್ಳಲು ನಮ್ಮ ಮನಸ್ಸು ತಯಾರಿರುವುದಿಲ್ಲ.

ಹಾಗಾಗಿ ಗುರಿ ಸಾಧನೆಗೆ ನಾವು ಹೆಚ್ಚಿನ ಪ್ರಾಧಾನ್ಯತೆ ನೀಡಿದಾಗ ಉಳಿದೆಲ್ಲ ನಕಾರಾತ್ಮಕ ಅಂಶಗಳು ಕಡಿಮೆಯಾಗುತ್ತದೆ. ಆಗಬೇಕು. ಅದರ ಬದಲು ತಾಳ್ಮೆ, ಪ್ರೀತಿ, ನಂಬಿಕೆಗಳನ್ನು ಹೆಚ್ಚಿಸಿಕೊಳ್ಳಲು ಸದಾ ಮನಸ್ಸು ತೆರೆದಿಟ್ಟು, ವ್ಯಕ್ತಿನಿಂದೆ, ಪರಿಸ್ಥಿತಿಯ ದೂಷಣೆ ಮಾಡದೆ ಅದರಿಂದಾದ ಅನುಭವಗಳನ್ನು ಪಾಠವಾಗಿಸಿಕೊಳ್ಳೋಣ.

ಇದೀಗ ತಮ್ಮ ಮಕ್ಕಳನ್ನು ವಿವಿಧ ಹಂತದ ಶಿಕ್ಷಣವನ್ನು ಪಡೆಕೊಳ್ಳುವುದಕ್ಕೆ ಬೇಕಾದ ಶಿಕ್ಷಣ ಸಂಸ್ಥೆಗಳನ್ನು ಆಯ್ಕೆಮಾಡುವ ಪರ್ವಕಾಲ. ವಿದ್ಯಾರ್ಥಿಗಳ ಪ್ರತಿಭೆಯ ವಿಕಾಸಕ್ಕೆ ಮುಕ್ತವಾತಾವರಣ ಅಗತ್ಯವಾದರೂ ಸ್ವಚ್ಛಂದತೆಯು ಸಲ್ಲ. ಅದಕ್ಕಾಗಿ ಪೋಷಕರು ಮತ್ತು ವಿದ್ಯಾರ್ಥಿಗಳು ಯೋಚಿಸಿ, ಮುಂದಡಿಯಿಡುವುದು ಒಳಿತು ಎಂಬುದು ಸರಯೂ ಬಳಗದ ಆಶಯ.

**ಅಡಿಯಿಡುಮುಂದೆ, ಗುರಿಯಡೆಗಿಂದೆ**

**ನಿರ್ಧಾರದ ಕಾಲ ಬಂದಿದೆ.**

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ

**ಕಾರ್ಯನಿರ್ವಾಹಕ ಸಂಪಾದಕರು :**
ಮಹೇಶ ನೆಟ್ಲ

**ಸಹಸಂಪಾದಕರು :**
ದಿವ್ಯಾಕುಮಾರಿ
ಸುಮಿತ್ರಾ ಎಸ್.ಜಿ.,
ಅನಿತಾ
ಜ್ಯೋತಿ
ಜಯಾನಂದ ಪೆರಾಜೆ
ಶ್ರೀಮತಿ ವಿನುತ ಎಸ್.ಎನ್.

**ವ್ಯವಸ್ಥಾಪಕ ಸಂಪಾದಕರು :**
ಸತೀಶ ಭಟ್, ಶಿವಗಿರಿ

**ವಿನ್ಯಾಸ :**
ಕುಶಾಲಪ್ಪ ಅಮ್ಮೂರು

ಚಿಂತನರಶ್ಮಿ

# ಭಾರತ ಸ್ವರ್ಗವಾಗಿತ್ತು

ಸಾವಿರಾರು ವರ್ಷಗಳ ಹಿಂದೆ 'ಫಾಹಿಯಾನ್' ಎಂಬ ಚೀನೀ ಯಾತ್ರಿಕ ಭಾರತಕ್ಕೆ ಬಂದಿದ್ದ. ಆ ಸಮಯದಲ್ಲಿ ಭಾರತವು ನೈತಿಕವಾಗಿಯೂ, ಭೌತಿಕವಾಗಿಯೂ ಶ್ರೀಮಂತವಾಗಿತ್ತು. ಆಗ ಇಲ್ಲಿ ಸುಳ್ಳು ಹೇಳುವುದು ಇರಲಿಲ್ಲ. ಕಳ್ಳಕಾಕರ ಭಯವಿರಲಿಲ್ಲ. ಹಿಗಾಗಿ ಮನೆಯಲ್ಲಿ ಯಾರೂ ಇಲ್ಲದೇ ಇದ್ದಾಗಲೂ ಬೀಗ ಹಾಕುತ್ತಿರಲಿಲ್ಲ.

ಅದೇ ಸಮಯದಲ್ಲಿ ಫಾಹಿಯಾನ ಸಂಚರಿಸುತ್ತ ಪಾಟಲೀಪುತ್ರದ ಬಳಿ ಮಗಧದ ಸಾಮಂತ ರಾಜನ ರಾಜಸಭೆಗೆ ಬಂದು ತಲುಪಿದ. ಇಬ್ಬರು ರೈತರು ತಮ್ಮ ವಿವಾದವನ್ನು ಬಗೆಹರಿಸಿಕೊಳ್ಳಲು ರಾಜನ ಬಳಿಗೆ ಬಂದಿದ್ದರು. ಫಾಹಿಯಾನ್‌ಗೆ ಇವರಿಬ್ಬರ ಜಗಳದ ಕಾರಣವೇನೆಂದು ತಿಳಿಯುವ ಕುತೂಹಲ ಉಂಟಾಯಿತು. ಅವರ ಮಾತುಗಳನ್ನು ಲಕ್ಷ್ಯ ಕೊಟ್ಟುಕೇಳತೊಡಗಿದ. ಮೊದಲೇ ರೈತ ರಾಜನಿಗೆ ತನ್ನ ದೂರನ್ನು ಹೇಳಲಾರಂಭಿಸಿದ:

"ಮಹಾರಾಜರೇ! ನಾನು ಇವನಿಗೆ ನನ್ನ ಹೊಲವನ್ನು ಮಾರಿದ್ದೇನೆ. ಇನ್ನು ಅಲ್ಲಿ ಚಿನ್ನವೋ– ಮಣ್ಣೋ ಏನಿದ್ದರೂ ಅವನಿಗೇ ಸೇರಿದ್ದು. ಆ ಹೊಲದಲ್ಲಿ ಇವನಿಗೆ ಚಿನ್ನದ ನಾಣ್ಯಗಳು ತುಂಬಿದ ಗಡಿಗೆ ಸಿಕ್ಕಿದೆ. ಇವನು ಅದನ್ನು ನನಗೆ ಕೊಡುತ್ತಿದ್ದಾನೆ. ಮಹಾರಾಜರೇ, ಈ ಧನವನ್ನು ನಾನು ಸ್ವೀಕರಿಸುವುದು ಸರಿಯೇ? ನೀವೇ ಯೋಗ್ಯವಾದ ತೀರ್ಮಾನವನ್ನು ತಿಳಿಸಬೇಕು" ಎಂದ.

ಇದಕ್ಕೆ ಉತ್ತರವಾಗಿ ಎರಡನೇ ರೈತ ಹೇಳಿದ. 'ಇವನು ಹೇಳಿದ್ದು ಸರಿಯಾಗಿಯೇ ಇದೆ. ಮಹಾರಾಜ! ನಾನು ಅವನ ಹೊಲವನ್ನು ಮಾತ್ರ ಕೊಂಡುಕೊಂಡಿದ್ದೇನೆ. ಚಿನ್ನದ ನಾಣ್ಯಗಳಿರುವ ಗಡಿಗೆಯನ್ನಲ್ಲ. ಆದ್ದರಿಂದ ಆ ಧನ ಅವನದೇ ಆಯಿತಲ್ಲವೇ? ನಾನದನ್ನು ಮುಟ್ಟಲಾರೆ.

ಫಾಹಿಯಾನ್ ಇವರಿಬ್ಬರ ಮಾತುಗಳನ್ನು ಕೇಳಿ ಆಶ್ಚರ್ಯಚಕಿತನಾದ. " ಇಲ್ಲಿ ಯಾರೂ ಚಿನ್ನದ ಬಗೆಗೆ ಚಿಂತೆ ಮಾಡುತ್ತಿಲ್ಲ. ಇಲ್ಲಿ ಜಗಳವಿರುವುದು ಚಿನ್ನ 'ಬೇಡ' ಎನ್ನುವುದಕ್ಕಾಗಿ !."

ಇಬ್ಬರೂ ಚಿನ್ನವನ್ನು ಸ್ವೀಕರಿಸಲು ಒಪ್ಪದಿರುವುದರಿಂದ ರಾಜನು ಅದನ್ನು ಗ್ರಾಮದ ಸೊತ್ತೆಂದೂ ಆ ಗ್ರಾಮದ ಒಳಿತಿಗಾಗಿ ಅದನ್ನು ವಿನಿಯೋಗಿಸಲಾಗುವುದೆಂದೂ ತೀರ್ಪಿತ್ತ.

ಈ ತೀರ್ಪಿನಿಂದ ಆ ಇಬ್ಬರೂ ರೈತರೂ ತುಂಬಾ ಸಂತೋಷಪಟ್ಟರು. ' ಪರದ್ರವ್ಯವನ್ನು ಮಣ್ಣಿಗೆ ಸಮನಾಗಿ ಕಾಣುವ ಚಾರಿತ್ರ್ಯ ಸಂಪನ್ನ ವ್ಯಕ್ತಿಗಳು ಇರುವುದರಿಂದಲೇ ಈ ದೇಶ ಸ್ವರ್ಗವಾಗಿದೆ' ಎಂದು ಫಾಹಿಯಾನ್ ಅಭಿಪ್ರಾಯಪಟ್ಟ.

## ವಿದ್ಯಾಕೇಂದ್ರ — ಅಂಬೇಡ್ಕರ್ ಜಯಂತಿ



ಶ್ರೀರಾಮ ವಿದ್ಯಾಕೇಂದ್ರದಲ್ಲಿ ಸಂವಿಧಾನಶಿಲ್ಪಿ ಡಾ। ಬಾಬಾ ಸಾಹೇಬ್ ಅಂಬೇಡ್ಕರ್ 123ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ನ್ಯಾಯವಾದಿ ರವೀಂದ್ರ ಕುಕ್ಕಾಜೆ 'ಭಾರತದ ಸಂವಿಧಾನದಲ್ಲಿ ಸ್ವಾತಂತ್ರ್ಯ–ಸಮಾನತೆಯ ಜೊತೆ ಸಮಭಾವದ ಸಹೋದರತೆಯ ಅಂಶವನ್ನು ಡಾ। ಬಿ.ಆರ್.ಅಂಬೇಡ್ಕರ್ ಅಳವಡಿಸಿದ್ದು, ಇದು ಜಗತ್ತಿನ ಶ್ರೇಷ್ಠ ಸಂವಿಧಾನವಾಗಿದೆ. ಅಂಬೇಡ್ಕರ್ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟಿದ್ದರು. ಸ್ವಪ್ರಯತ್ನದಿಂದ ಶಿಕ್ಷಣ ಪಡೆದು–ಕೊಂಡರು. ಸನಾತನ ಧರ್ಮದ ತಳಹದಿಯಲ್ಲಿ ಸಂವಿಧಾನ ರಚನೆ ಮಾಡಿ ಮಾನವೀಯತೆಗೆ ಒತ್ತು ನೀಡಿದ್ದಾರೆ. ಇಂದು ರಾಷ್ಟ್ರೀಯ ಗುರಿಯ ಶಿಕ್ಷಣ ಅಗತ್ಯವಿದ್ದು, ಉತ್ತಮ ನಾಯಕರಿಂದ ಮಾತ್ರ ರಾಷ್ಟ್ರ ಸುಭದ್ರವಾಗಲು ಸಾಧ್ಯ' ಎಂದರು.

ವಿದ್ಯಾಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್ ಅಧ್ಯಕ್ಷತೆ ವಹಿಸಿ, ಡಾ। ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಶಿಕ್ಷಕ ವಿನೋದ್ ಶೆಟ್ಟಿ ಅಂಬೇಡ್ಕರ್ ಜೀವನದ ಹೋರಾಟದ ಸನ್ನಿವೇಶಗಳನ್ನು ವಿವರಿಸಿದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ವಸಂತ ಮಾಧವ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ಶಿಕ್ಷಕ ಗೋಪಾಲ ನಿರೂಪಿಸಿ, ವಿದ್ಯಾರ್ಥಿಗಳಾದ ವಿಘ್ನೇಶ್ ಸ್ವಾಗತಿಸಿ, ಶಶಾಂಕ ವಂದಿಸಿದರು.

## ಯುಗಾದಿ ಉತ್ಸವ

ದಿನಾಂಕ 31/03/2014 ಸೋಮವಾರದಂದು ಚಂದ್ರಮಾನ ಯುಗಾದಿಯ ಪ್ರಯುಕ್ತ ಮನೆಮನೆಗಳಿಗೆ ಹೋಗಿ ಅರಶಿನ ಕುಂಕುಮ, ಹೂವು, ಬೇವು ಬೆಲ್ಲವನ್ನು ನೀಡಿ ಯುಗಾದಿಯ ಶುಭಾಶಯವನ್ನು ತಿಳಿಸುವುದರ ಮೂಲಕ ಉತ್ಸವವನ್ನು ಆಚರಿಸಲಾಯಿತು. ಶ್ರೀರಾಮ ಶಿಶುಮಂದಿರದ ಕಡೆಯಿಂದ ಅಮ್ಟೂರು, ಸುಧೆಕಾರು, ಪೂರ್ಲಿಪಾಡಿ, ಕುರ್ಮಾನ್, ಕೊಳಕೀರು, ಮುಲಾರು ಮುಂತಾದ ಕ್ಷೇತ್ರಗಳ ಒಟ್ಟು 249 ಮನೆಗಳಿಗೆ, ಶ್ರೀಕೃಷ್ಣ ಶಿಶುಮಂದಿರ ಸಜಿಪದ ಕಡೆಯಿಂದ 100 ಮನೆಗಳಿಗೆ, ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಬಿ.ಸಿ.ರೋಡ್ ಕಡೆಯಿಂದ 125 ಮನೆಗಳಿಗೆ, ಶ್ರೀ ಗಣೇಶ ಶಿಶುಮಂದಿರದ ಬೊಂಡಾಲ ಕಡೆಯಿಂದ 75 ಮನೆಗಳಿಗೆ ಹೋಗಿ ಬೇವು ಬೆಲ್ಲವನ್ನು ಹಂಚಿ ಶುಭಾಶಯವನ್ನು ಹೇಳಲಾಯಿತು.

## ಸಾಮೂಹಿಕ ಹುಟ್ಟುಹಬ್ಬ ಮತ್ತು ಬೇಸಿಗೆ ಶಿಬಿರಗಳು

### ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಬಿ.ಸಿ.ರೋಡ್

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ದಿನಾಂಕ 10/04/2014 ಗುರುವಾರದಂದು ಬೆಳಗ್ಗೆ **ಮಕ್ಕಳ ಸಾಮೂಹಿಕ ಹುಟ್ಟುಹಬ್ಬವನ್ನು** ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಪುರಸಭೆಯ ಮಾಜಿ ಅಧ್ಯಕ್ಷ ದಿನೇಶ್‌ಭಂಡಾರಿ ಆಗಮಿಸಿದ್ದರು. ಶಿಶುಮಂದಿರದ ಮಕ್ಕಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿ, ಮಾತೆಯರಿಂದ ಮಕ್ಕಳಿಗೆ ಆರತಿ ಬೆಳಗಿ ಕುಂಕುಮ ಇಟ್ಟು ಅಕ್ಷತೆಯನ್ನು ಹಾಕಿ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಹಾಗೆಯೇ ಮಕ್ಕಳಿಗೆ ಕಿರುಕಾಣಿಕೆಯಾಗಿ ಲೇಖನಿ ಸಾಮಾಗ್ರಿಯನ್ನು ವಿತರಿಸಲಾಯಿತು. ಒಟ್ಟು 45 ಮಕ್ಕಳು 55 ಮಾತೆಯರು 100 ಸಂಖ್ಯೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಕಾರ್ಯಕ್ರಮದ ಸ್ವಾಗತ ಮತ್ತು ಪರಿಚಯ ಲಕ್ಷ್ಮಣ ಅಗ್ರಬೈಲು ಮತ್ತು ಧನ್ಯವಾದವನ್ನು ಯೋಗಶಿಬಿರಾರ್ಥಿ ಶಕುಂತಲಾ ಇವರು ಮಾಡಿದರು. ಭಜನಾ ತಂಡದ ಸದಸ್ಯೆಯಾದ ಶ್ರೀಮತಿ ಮಣಿಮಾಲಾ ಇವರು ಕಾರ್ಯಕ್ರಮ ನಿರೂಪಿಸಿದರು. ಶಿಶುಮಂದಿರದ ಅಧ್ಯಕ್ಷರಾದ ಪ್ರಮೋದ್ ಅಜ್ಜಿಬೆಟ್ಟು ಉಪಸ್ಥಿತರಿದ್ದರು.

ದಿನಾಂಕ 10/04/2014 ರಿಂದ 15/04/2014 ಸೋಮವಾರದವರೆಗೆ 5 ದಿನದವರೆಗೆ ಮಕ್ಕಳಿಗೆ **ಚೈತನ್ಯ ಬೇಸಿಗೆ ಶಿಬಿರ**ವು ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಬಸವ ಮಂಟಪ ಅಜ್ಜಿಬೆಟ್ಟುವಿನಲ್ಲಿ ನಡೆಯಿತು. 5 ದಿನಗಳ ಈ ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಬಂದಂತಹ ಹಿರಿಯರು ಹೆಚ್.ಎನ್.ಹೆಬ್ಬಾರ್, ಡಾ॥ಕಮಲಾಭಟ್, ದಿನೇಶ್‌ಭಂಡಾರಿ, ಗಂಗಾಮಾತಾಜಿ ಹಾಗೂ ಪ್ರಶಾಂತ್. ಶಿಬಿರದಲ್ಲಿ ಮಕ್ಕಳಿಗೆ ಕಲೆಗಳ ಜೊತೆಗೆ ಕರಕುಶಲಗಳನ್ನು ಶೋಭಾಮಾತಾಜಿ ಹೇಳಿಕೊಟ್ಟರು. ಜೊತೆಗೆ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಮಾತಾಜಿಗಳಾದ ಸೌಮ್ಯ , ಶೈನಿ, ಪ್ರೀತಾ ಹಾಗೂ ಶಿಶುಮಂದಿರದ ದಿವ್ಯ ಆಟಗಳನ್ನು ಆಡಿಸಿದರು.

ಕೊನೆಯ ದಿನ ಪಿಲಿಕುಲಕ್ಕೆ ಹೊರಸಂಚಾರ ಮಾಡಲಾಯಿತು. ಶಿಬಿರದಲ್ಲಿ ಒಟ್ಟು ಸಂಖ್ಯೆ 56. ಶಿಬಿರಾರ್ಥಿಗಳು ಭಾಗವಹಿಸಿದ್ದರು

### ಶ್ರೀರಾಮ ಶಿಶು ಮಂದಿರ ಕಲ್ಲಡ್ಕ



ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀರಾಮ ಶಿಶುಮಂದಿರ ಆಯೋಜಿಸಿದ್ದ **ಬಾಲಗೋಕುಲದ ಮಕ್ಕಳ ಶಿಬಿರ**ವು ದಿನಾಂಕ 11/04/2014 ಶುಕ್ರವಾರದಿಂದ 15/04/2014 ಮಂಗಳವಾರದವರೆಗೆ ಕಲ್ಲಡ್ಕ ಸಮೀಪದಲ್ಲಿರುವ **ನೆಟ್ಲ, ಅಮ್ಟೂರು, ಬರಿಮಾರು ಮೂರು ಕ್ಷೇತ್ರಗಳಲ್ಲಿ** ನಡೆಯಿತು.

ಶಿಬಿರದಲ್ಲಿ ರಾಮಾಯಣ, ಮಹಾಭಾರತದ ಕಥೆಗಳು, ಹಿಂದೂ ಹಬ್ಬಗಳು, ಸಂಪ್ರದಾಯದ ಆಚರಣೆ, ಆಹಾರ ಆರೋಗ್ಯ, ಕರಕುಶಲ(ಕ್ರಾಫ್ಟ್) ಮುಂತಾದ ವಿಷಯಗಳ ಬಗ್ಗೆ ತಿಳಿಸಿಕೊಡಲಾಯಿತು. ಶ್ರೀಮತಿ ಕಮಲಾಭಟ್, ಭಗಿನಿ ಗಂಗಾಮಾತಾಜಿ , ಶ್ರೀಮತಿ ಶಶಿಕಲಾ, ಶ್ರೀಮತಿ ಶೋಭಾಮಾತಾಜಿ, ಭಗಿನಿ ಹೇಮಾ ಮಾತಾಜಿ, ಭಗಿನಿ ಪ್ರೀತಾ ಮಾತಾಜಿ, ಶಿಕ್ಷಕರಾದ ರವಿರಾಜ್, ಜಿನ್ನಪ್ಪ ಇವುಗಳನ್ನು ತಿಳಿಸಿಕೊಟ್ಟರು.

ದಿನಾಂಕ 15/04/2014ರಂದು ಶಿಬಿರದ ಸಮಾರೋಪವನ್ನು ಮಾಡಲಾಯಿತು. 3 ಕಡೆಯ ಮಕ್ಕಳನ್ನು ಹೊರಸಂಚಾರ ಕರೆದುಕೊಂಡು ಹೋಗಲಾಯಿತು. ಮೊದಲಿಗೆ ಶ್ರೀರಾಮ ವಿದ್ಯಾಕೇಂದ್ರಕ್ಕೆ ಬಂದು ಅಲ್ಲಿ ಶಾಲೆಯ ವೀಕ್ಷಣೆ ಮಾಡಿ ಉಪಾಹಾರ ಮುಗಿಸಿ ಅಲ್ಲಿಂದ ಶ್ರೀ ಶಂಕರನಾರಾಯಣ ಮಹಾಗಣಪತಿ ನಂದಾವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ಶಿಬಿರದ ಸಮಾರೋಪವನ್ನು ಮಾಡಲಾಯಿತು. ಸಮಾರೋಪದಲ್ಲಿ ಮಕ್ಕಳು ಸುಭಾಷಿತ, ಅಮೃತವಚನ, ಮಂಕುತಿಮ್ಮನ ಕಗ್ಗ, ಸರ್ವಜ್ಞನ ವಚನವನ್ನು ಕಂಠಪಾಠ ಹೇಳಿದರು. 5 ಮಕ್ಕಳು ಶಿಬಿರದ ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಸಂತ ಮಾಧವ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಶಂಕರ ನಾರಾಯಣ ಮಹಾಗಣಪತಿ ದೇವಸ್ಥಾನದ ಆಡಳಿತ ಮಂಡಳಿ ಮುಖ್ಯಸ್ಥರಾದ ಶ್ರೀಯುತ ರಾಧಾಕೃಷ್ಣ ಆಳ್ವರು ವಹಿಸಿದ್ದರು. ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ನಾರಾಯಣ ಸೋಮಯಾಜಿ ಹಾಗೂ ಶ್ರೀನಿವಾಸ ಪ್ರಭು ಉಪಸ್ಥಿತರಿದ್ದರು.

ನೆಟ್ಲ ಶಿಬಿರದಲ್ಲಿ 55 ಮಕ್ಕಳು, ಅಮ್ಟೂರಿನಲ್ಲಿ



20 ಮಕ್ಕಳು ಬರಿಮಾರಿನಲ್ಲಿ 38 ಮಕ್ಕಳು, ಒಟ್ಟು 113 ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು.

### ಶ್ರೀಗಣೇಶ ಶಿಶುಮಂದಿರ ಬೊಂಡಾಲ

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀ ಗಣೇಶ ಶಿಶುಮಂದಿರ ಬೊಂಡಾಲದಲ್ಲಿ 06/04/2014 ಭಾನುವಾರದಂದು ಸಂಜೆ ಶಿಶುಮಂದಿರದ ಮಕ್ಕಳ **ಸಾಮೂಹಿಕ ಹುಟ್ಟುಹಬ್ಬವನ್ನು** ಆಚರಿಸಲಾಯಿತು. ಮಾತೆಯರು ಮಕ್ಕಳಿಗೆ ಆರತಿ ಎತ್ತಿ ಅಕ್ಷತೆ ಹಾಕಿ ಕುಂಕುಮ ಇಟ್ಟು ಸಿಹಿಯನ್ನು ನೀಡಿ ಹುಟ್ಟುಹಬ್ಬವನ್ನು ಆಚರಣೆ ಮಾಡಿದರು. ನಂತರ ವಿವೇಕಾನಂದ ಹಿರಿಯ ವಿದ್ಯಾರ್ಥಿ ಸಂಘ ಹಾಗೂ ಶ್ರೀ ಗಣೇಶ ಶಿಶುಮಂದಿರದ ಜಂಟಿ ಆಶ್ರಯದಲ್ಲಿ **ವಾರ್ಷಿಕೋತ್ಸವ** ನಡೆಯಿತು. ಅದರಲ್ಲಿ ಶಿಶುಮಂದಿರದ ಎಲ್ಲಾ ಪುಟಾಣಿಗಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಚಂದಗಾಣಿಸಿಕೊಟ್ಟರು.

ದಿನಾಂಕ 11/04/2014 ಶುಕ್ರವಾರದಿಂದ 13/04/2014 ಭಾನುವಾರದವರೆಗೆ 3 ದಿನಗಳವರೆಗೆ ಮಕ್ಕಳಿಗೆ **ಬೇಸಿಗೆ ಶಿಬಿರ** ಮಾಡಲಾಯಿತು. ಶಿಬಿರದ ಉದ್ಘಾಟನೆಯನ್ನು ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ ಇವರು ಮಾಡಿ ಗುರುಶಿಷ್ಯರ ಕಥೆಯನ್ನು ಹೇಳಿದರು. 12/04/2014ರಂದು ಭ॥ಗಂಗಾಮಾತಾಜಿ ಮಕ್ಕಳಿಗೆ ಕಥೆಯನ್ನೂ, 13/04/2014ರಂದು ಗೀತಾ ಮಾತಾಜಿ ಇವರು ಮಕ್ಕಳಿಗೆ ರಂಗೋಲಿ ಹಾಕುವುದನ್ನೂ ಹೇಳಿಕೊಟ್ಟರು. ಶಿಬಿರದಲ್ಲಿ ಒಟ್ಟು 15 ಮಕ್ಕಳು ಭಾಗವಹಿಸಿದ್ದರು. ಶಿಬಿರದಲ್ಲಿ ಪ್ರಾರ್ಥನೆ ಕಂಠಪಾಠ, ಆಟ, ರಸಪ್ರಶ್ನೆ ಮುಂತಾದ ಅವಧಿಗಳನ್ನು ಜೋಡಿಸಲಾಗಿತ್ತು.

### ಶ್ರೀಕೃಷ್ಣ ಶಿಶುಮಂದಿರ ಸಜೀಪ

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀಕೃಷ್ಣ ಶಿಶುಮಂದಿರ ಸಜೀಪದಲ್ಲಿ ದಿನಾಂಕ 07/04/2014 ಸೋಮವಾರದಂದು ಮಕ್ಕಳ **ಸಾಮೂಹಿಕ ಹುಟ್ಟುಹಬ್ಬವನ್ನು** ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶ್ರೀಯುತ ರಾಧಾಕೃಷ್ಣ ಆಳ್ವರವರು ಆಗಮಿಸಿದ್ದರು. ಇವರು ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿದರು. ಶಿಶುಮಂದಿರದ ಮಕ್ಕಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಮಾತೆಯರಿಂದ ಮಕ್ಕಳಿಗೆ ಆರತಿ ಎತ್ತಿ ಅಕ್ಷತೆ ಹಾಕಿ ಕುಂಕುಮ ಇಟ್ಟು ಹುಟ್ಟುಹಬ್ಬವನ್ನು ಆಚರಿಸಲಾಯಿತು. ನಂತರ ಮಕ್ಕಳಿಗೆ ಸಿಹಿಯನ್ನು ನೀಡಲಾಯಿತು.

ಈ ಕಾರ್ಯಕ್ರಮದ ಸ್ವಾಗತ ಪರಿಚಯವನ್ನು ಶ್ರೀಮತಿ ಜಯಶ್ರೀ ಮತ್ತು ಧನ್ಯವಾದವನ್ನು ಶ್ರೀಮತಿ ಮಮತಾ ಇವರು ಮಾಡಿದರು. ಕಾರ್ಯಕ್ರಮದಲ್ಲಿ ಒಟ್ಟು 16 ಮಂದಿ ಮಕ್ಕಳು 15 ಮಂದಿ ಮಾತೆಯರು 31 ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಿನಾಂಕ 11/04/2014ರಿಂದ 15/04/2014ರವರೆಗೆ **"ಚೈತನ್ಯ" ಬೇಸಿಗೆ ಶಿಬಿರವು** ಶ್ರೀಕೃಷ್ಣ ಶಿಶುಮಂದಿರ ಸಜೀಪದಲ್ಲಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಶ್ರೀಮತಿ ಮಲ್ಲಿಕಾ ಶೆಟ್ಟಿ ಮಾಡಿ, ಶಿಬಿರದ ಉದ್ದೇಶವನ್ನು ತಿಳಿಸಿದರು. 11/04/2014ರಂದು ಶ್ರೀಮತಿ ಪ್ರೇಮಾ ಮಾತಾಜಿಯವರು ಕ್ರಾಂತಿಕಾರಿ ವೀರರ ಬಗ್ಗೆ ಕಥೆಯನ್ನು ಹೇಳಿದರು. 12/04/2014ರಂದು ಶ್ರೀಮತಿ ಸುಧಾಭಟ್ ಪುರಾಣ ಕಥೆಯನ್ನು



ಹೇಳಿದರು. 13/04/2014ರಂದು ಶ್ರೀಮತಿ ರೂಪಕಲಾ ಮಾತಾಜಿ ಇವರು ಕಥೆ ಹೇಳಿಸಿ ಆಟ ಆಡಿಸಿದರು. ಹೀಗೆ ಮೂರು ದಿನಗಳವರೆಗೆ ನಡೆದ ಶಿಬಿರವು ದಿನಾಂಕ 15/04/2014ರಂದು ಸಮಾಪನ ಗೊಂಡಿತು. ಸಮಾರೋಪ ಮುಖ್ಯ ಅತಿಥಿಯಾಗಿ ಶ್ರೀಯುತ ಸುಬ್ರಹ್ಮಣ್ಯ ಭಟ್ ಇವರು ಆಗಮಿಸಿದ್ದರು. ಕಾರ್ಯಕ್ರಮದ ಪ್ರಾರ್ಥನೆಯನ್ನು ವೈಶಾಖ್ ಮತ್ತು ವೈಷ್ಣವಿ ಮಾಡಿ, ಕಾರ್ಯಕ್ರಮದ ಸ್ವಾಗತ ಪರಿಚಯ ಕುಮಾರಿ ಜನ್ಯರವರು ಮಾಡಿದರು. ನಂತರ ಶಿಬಿರಾರ್ಥಿಗಳು ಶಿಬಿರಗೀತೆ ಸಾಮೂಹಿಕವಾಗಿ ಹಾಡಿದರು. ಕೆಲವು ಶಿಬಿರಾರ್ಥಿಗಳು ಶಿಬಿರದ ಅನುಭವವನ್ನು ಹಂಚಿಕೊಂಡರು. ನಂತರ ಹಿರಿಯರಾದ ಶ್ರೀಯುತ ಸುಬ್ರಹ್ಮಣ್ಯ ಭಟ್ ಇವರು ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬಂತೆ ಎಳೆಯ ವಯಸ್ಸಿನಲ್ಲಿ ಕಲಿಯುವ ಅವಕಾಶಗಳಿದ್ದು, ಅದನ್ನು ಬಹಳ ಸಂತೋಷದಿಂದ ಪಡೆದುಕೊಳ್ಳಬೇಕು ಅದಕ್ಕೆ ಇಂತಹ ಶಿಬಿರಗಳು ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟು ಮಕ್ಕಳಿಗೆ ಮಾರ್ಗದರ್ಶನ ನೀಡಿದರು. ಬಳಿಕ ಸೌರಮಾನ ಯುಗಾದಿಯ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಕುಮಾರಿ ಧನ್ಯ ವಂದಿಸಿದರು.

## ಪ್ರಾಥಮಿಕ ವಿಭಾಗ

### ದೀಪ ಪ್ರದಾನ

ದಿನಾಂಕ:04.04.2014



ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿಯ 7ನೇ ತರಗತಿಯ ವಿದ್ಯಾರ್ಥಿಗಳ ದೀಪಪ್ರದಾನ ಕಾರ್ಯಕ್ರಮವು ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು.

ದೀಪ ಪ್ರಜ್ವಲನ ಮತ್ತು ಭಾರತ ಮಾತೆಗೆ ಪುಷ್ಪಾರ್ಚನೆಯನ್ನು ಮಾಡುವುದರ ಮೂಲಕ ಶ್ರೀಯುತ ಸುರೇಶ್‌ಚಂದ್ರ ಶೆಟ್ಟಿ ಮಂಗಳೂರು (ಹಿಂದೂ ಮಜ್‌ದೂರ್ ಸಂಘದ ರಾಜ್ಯಾಧ್ಯಕ್ಷ) ಈ ಒಂದು ಭಾವಾನಾತ್ಮಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ, 'ಈ ಶಾಲೆಗೆ ಭೇಟಿ ನೀಡಿ ನನ್ನ ಈ ಜೀವನ ಸಾರ್ಥಕವಾಯಿತು. ಈ ಶಾಲೆಗೆ ಬಂದು ಉತ್ತಮ ಸಂಸ್ಕಾರಯುತವಾದ ಶಿಕ್ಷಣವನ್ನು ಪಡೆಯುತ್ತಿದ್ದೀರಿ. ನಿಮ್ಮ ಜನ್ಮ ಇನ್ನಷ್ಟು ಸಾರ್ಥಕ' ಎಂದು ನುಡಿದರು.

ಕಾರ್ಯಕ್ರಮದಲ್ಲಿ 6ನೇ ತರಗತಿ ವಿದ್ಯಾರ್ಥಿಗಳು ತಮ್ಮ 7ನೇ ತರಗತಿಯ ಅಕ್ಕ-ಅಣ್ಣಂದಿರಿಗೆ ಪುಷ್ಪವನ್ನು ನೀಡಿ ಆಶೀರ್ವಾದವನ್ನು ಪಡೆದರು. ಹಾಗೆಯೇ ಬೀಳ್ಕೊಡುವ 7ನೇ ತರಗತಿಯ ವಿದ್ಯಾರ್ಥಿಗಳು 6ನೇ




ತರಗತಿಯ ವಿದ್ಯಾರ್ಥಿಗಳಿಗೆ ದೀಪ ಪ್ರದಾನ ಮಾಡಿ ತಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಪಡೆದ ತಮ್ಮ ಅಭಿಪ್ರಾಯ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಅತಿಥಿಯಾಗಿ ಆಗಮಿಸಿದ ಕರ್ನಾಟಕ ಬ್ಯಾಂಕಿನ ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ಶ್ರೀಯುತ ಜಯರಾಮ ಭಟ್ ಮಾತನಾಡಿ ವಿದ್ಯಾರ್ಥಿಗಳು ಮುಂದೆಯೂ ಶಾಲೆಯ ಏಳಿಗೆಗಾಗಿ ತಮ್ಮಿಂದ ಸಾಧ್ಯವಾಗುವ ರೀತಿಯಲ್ಲಿ ಸಹಾಯ ಮಾಡಬೇಕೆಂದು ನುಡಿದು ಶುಭ ಹಾರೈಸಿದರು.

ಶಾಲಾ ಸಂಚಾಲಕ ಡಾ. ಪ್ರಭಾಕರ ಭಟ್ ಕಲ್ಲಡ್ಕ ಮಾತನಾಡಿ ಉತ್ತಮವಾದ ಸಂಸ್ಕಾರಯುತ ಶಿಕ್ಷಣವನ್ನು ಪಡೆದು ಮುಂದೆ ಅದೇ ಸಂಸ್ಕಾರವನ್ನು ಇನ್ನೊಬ್ಬರು ಅಳವಡಿಸಿಕೊಳ್ಳುವಲ್ಲಿ ನೀವು ಪ್ರಮುಖ ಪಾತ್ರ ವಹಿಸಬೇಕು. ದೀಪ ಉರಿಯುವಾಗ ಗಾಳಿ ಬಂದಂತಹ ಸಂದರ್ಭದಲ್ಲಿ ಒಮ್ಮೆ ಆಕಡೆ ಈಕಡೆ ದೀಪದ ಜ್ವಾಲೆ ವಾಲಿದರೂ ಮತ್ತೆ ನೇರ ನಿಲ್ಲುತ್ತದೆ. ಹಾಗೆಯೇ ಜೀವನದಲ್ಲಿ ಏನೇ ಬಂದರೂ ಮುಂದಿನ ಹೆಜ್ಜೆಯನ್ನು ಇಡುವಲ್ಲಿ ಒಳ್ಳೆಯ ಚಿಂತನೆಯಿಂದ ಉತ್ತಮ ನಾಳೆಗಾಗಿ ಆಲೋಚನೆಯಿಂದ ಹೆಜ್ಜೆಯನ್ನಿಡಬೇಕೆಂದು ಆಶೀರ್ವದಿಸಿದರು.

ವೇದಿಕೆಯಲ್ಲಿ ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀಯುತ ನಾರಾಯಣ ಸೋಮಯಾಜಿ, ಜಿತೇಂದ್ರ.ಎಸ್. ಕೊಟ್ಟಾರಿ, ಸತೀಶ್‌ಭಟ್ ಶಿವಗಿರಿ, ಮುಖ್ಯೋಪಾಧ್ಯಾಯ ರವಿರಾಜ್ ಉಪಸ್ಥಿತರಿದ್ದರು. 7ನೇ ವಿದ್ಯಾರ್ಥಿಗಳು ತಮ್ಮ ಕೊಡುಗೆಯನ್ನು ಶಾಲೆಗೆ ನೀಡಿ ಆಶೀರ್ವಾದವನ್ನು ಪಡೆದರು.

ಶ್ರೀಮತಿ ಅನ್ನಪೂರ್ಣ ಮಾತಾಜಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಶ್ರೀಲಕ್ಷ್ಮೀ ಪ್ರೇರಣಾ ಗೀತೆ ಹಾಡಿದಳು. ಕು.ಹರ್ಷಿತಾ ಸ್ವಾಗತಿಸಿ, ಕು.ರೇಷ್ಮಾ ವಂದಿಸಿದ ಕಾರ್ಯಕ್ರಮವನ್ನು ಕು.ಮೇದಿನಿ ನಿರೂಪಿಸಿದರು.



## ಚಿತ್ರನೋಡಿ-ಶೀರ್ಷಿಕೆ ನೀಡಿ

**ಈ ಚಿತ್ರಕ್ಕೆ ಸೂಕ್ತ ಶೀರ್ಷಿಕೆಯನ್ನು ಒಂದೆರೆಡು ವಾಕ್ಯಗಳಲ್ಲಿ ಬರೆದು ನಿಮ್ಮ ವಿಭಾಗದಲ್ಲಿರುವ ಸರಯೂ ಪೆಟ್ಟಿಗೆಗೆ ಹಾಕಿ. ಇಲ್ಲವೇ ಇ-ಮೇಲ್ ಕಳುಹಿಸಿ ಆಯ್ದ ಶೀರ್ಷಿಕೆಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**




# ಚಿಣ್ಣರ ಲಹರಿ ಬೇಸಿಗೆ ಶಿಬಿರ

**ದಿ. : 27.03.2014 – 03–04–2014**



**ಚಿಣ್ಣರ ಲಹರಿ ಬೇಸಿಗೆ ಶಿಬಿರವನ್ನು** ಶ್ರೀ ವಿಜಯ ನಾಮ ಸಂವತ್ಸರ ಶಿಶಿರ ಋತು ಪಾಲ್ಗುಣ ಮಾಸ ಶುಕ್ಲ ಪಕ್ಷದ ದಿನ (27–03–2014) ದಂದು ಉದ್ಘಾಟಿಸಿ, ಆರು ದಿನಗಳ ಕಾಲ ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಬಂಟ್ವಾಳ ಕ್ಷೇತ್ರ ಶಿಕ್ಷಣ ಸಂಯೋಜಕಿ ಶ್ರೀಮತಿ ಸುಜಾತ ಇವರು ನೆರವೇರಿಸಿದರು. ಬಾಳ್ತಿಲ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪುಷ್ಪಾ ಅತಿಥಿಗಳಾಗಿದ್ದರು. ಶಿಕ್ಷಕ–ರಕ್ಷಕ ಸಂಘದ ಅಧ್ಯಕ್ಷ ಶಿವಗಿರಿ ಸತೀಶ್ ಭಟ್ ಸ್ವಾಗತಿಸಿ, ಮುಖ್ಯೋಪಾಧ್ಯಾಯ ರವಿರಾಜ ಕಣಂತೂರ್ ವಂದಿಸಿ, ರೂಪಕಲಾ ಮಾತಾಜಿ ನಿರೂಪಿಸಿದರು.





ಶಿಬಿರಕ್ಕೆ ಅರ್ಥಪೂರ್ಣ ಹೆಸರನ್ನು ನೀಡಿದ 7ನೇ ತರಗತಿಯ ವಿದ್ಯಾರ್ಥಿನಿ ನಿವೇದಿತಾ ಇವಳಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಉದ್ಘಾಟನೆಯ ನಂತರದ ಮೂರು ಅವಧಿಗಳಲ್ಲಿ ತಂಡಗಳ ರಚನೆ, ಶಿಬಿರ ಗೀತೆಗಳನ್ನು ಅಭ್ಯಾಸ ಮಾಡಿಸಿ, ಕಥಾ ಅವಧಿಯನ್ನು ತೆರೆದುಕೊಳ್ಳಲಾಯಿತು.

ಎರಡನೇ ದಿನ ಕಬೀರ್ ದೋಹ, ಗೀತೆ, ಶ್ಲೋಕ, ಮಂಕುತಿಮ್ಮನ ಕಗ್ಗಗಳ ಅಭ್ಯಾಸದ ಜೊತೆಗೆ ಶ್ರೀರಾಮ ಪದವಿ ಪೂರ್ವ ವಿಭಾಗದ ರಸಾಯನ ಶಾಸ್ತ್ರ ಉಪನ್ಯಾಸಕ ಗಿರೀಶ್ ಕುಮಾರ್ ಮಂಗಲ್ಪಾಡಿ ಇವರು ದೇಶ ಭಕ್ತಿಗೀತೆಗಳನ್ನು ಮಕ್ಕಳಿಗೆ ಹೇಳಿಕೊಟ್ಟರು. ವಿದ್ಯಾರ್ಥಿಗಳಿಂದ ಕತೆಗಳನ್ನು ಹೇಳಿಸಿ ಅಭಿನಯ ಗೀತೆಗಳನ್ನು ಮಾಡಿಸಲಾಯಿತು. ಪ್ರೌಢಶಾಲಾ ಶಿಕ್ಷಕ ರಾಜೇಶ್ ಇವರು ವಿದ್ಯಾರ್ಥಿಗಳಿಗೆ ಕ್ಲೇ ಮಾಡಲಿಂಗ್ ಅಭ್ಯಾಸ ಮಾಡಿಸಿದರು. ಶ್ರೀ ರಾಮಕೃಷ್ಣ ಕಾಟುಕುಕ್ಕೆ ಇವರು ನಡೆಸಿಕೊಟ್ಟ ದಾಸವಾಣಿ ಕಾರ್ಯಕ್ರಮ ದಿನದ ವಿಶೇಷವಾಗಿತ್ತು. ಇವರಿಗೆ ದೇವದಾಸ್ ಪ್ರಭು ಬಂಟ್ವಾಳ ಹಾರ್ಮೋನಿಯಂನಲ್ಲಿ ಹಾಗೂಶ್ರೀರಾಮ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿ ರಾಕೇಶ್ ತಬಲದಲ್ಲಿ ಸಹಕರಿಸಿದರು.

ಪ್ರತಿ ತಿಂಗಳು ನಡೆಸಿ ಕೊಂಡು ಬರುತ್ತಿದ್ದ ಭಜನೆಯ ಸಮಾರೋಪ ಹಾಗೂ ಮಾರ್ಚ್ ಮತ್ತು ಎಪ್ರಿಲ್ ತಿಂಗಳಲ್ಲಿ ಹುಟ್ಟುಹಬ್ಬವನ್ನು ಅಚರಿಸುತ್ತಿರುವ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬವನ್ನು ಶಿಬಿರದ ಮೂರನೇ ದಿನದಲ್ಲಿ ಅಯೋಜಿಸಲಾಗಿತ್ತು. ಕಿರಿಯ ಹಾಗು ಹಿರಿಯ ಪ್ರಾಥಮಿಕ ಶಾಲಾ ಎಲ್ಲಾ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಸದಸ್ಯ ದಯನಂದ, ಸೀತಾರಾಮ ಟ್ರಸ್ಟ್‌ನ ಸದಸ್ಯೆ ಉಷಾ ಗೋಪಾಲ್, ಬೌದ್ಧಿಕ ಅವಧಿ ನಡೆಸಿಕೊಟ್ಟು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ, ಶ್ರೀರಾಮ ಪದವಿಪೂರ್ವ ವಿಭಾಗದ ಹಿಂದಿ ಉಪನ್ಯಾಸಕಿ ಶ್ರೀಮತಿ ಶೋಭಾ ಉಪಸ್ಥಿತರಿದ್ದರು.




ನಾಲ್ಕನೇ ದಿನ ಸಂಗೀತವನ್ನು ವಿಶೇಷವಾಗಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಂದ 'ಸಂಗೀತ ರಸಮಂಜರಿ' ಕಾರ್ಯಕ್ರಮ ನಡೆಯಿತು. ಇಂದ್ರಪ್ರಸ್ಥ ವಿದ್ಯಾಸಂಸ್ಥೆ ಉಪ್ಪಿನಂಗಡಿ ಇಲ್ಲಿನ ಶಿಕ್ಷಕ ಶಿವಗಿರಿ ಸದಾಶಿವ ಭಟ್ ಹಾರ್ಮೋನಿಯಂ ಹಾಗೂ ಶ್ರೀರಾಮ ಪ್ರೌಢಶಾಲಾ ವಿದ್ಯಾರ್ಥಿ ಸುಶಾನ್ ಶಂಕರ್ ತಬಲದಲ್ಲಿ ಸಹಕರಿಸಿದರು. ಸಂಗೀತ ಗುರುಗಳಾದ ರಜತಾ ಕೃಷ್ಣಾಚಾರ್ಯ ಹಾಗೂ ಹೆಚ್. ಕೃಷ್ಣಾಚಾರ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು




ನಂತರದ ಅವಧಿಗಳಲ್ಲಿ ಶ್ರೀ ರಾಮ ಪದವಿ ವಿಭಾಗದ ಪ್ರಾಚಾರ್ಯ ಕೃಷ್ಣಪ್ರಸಾದ್



ಕಾಯರ್‌ಕಟ್ಟೆ ಇವರಿಂದ ಕಥಾ ಅವಧಿ , ಶಿವಗಿರಿ ಸದಾಶಿವ ಭಟ್ ಇವರಿಂದ ಚಿತ್ರಕಲಾ ಅವಧಿ, ರಾಜೇಶ್ ಶ್ರೀಮಾನ್ ಅವರಿಂದ ಕ್ಲೇ ಮಾಡೆಲಿಂಗ್ ಅಭ್ಯಾಸಗಳು ನಡೆಯಿತು. ಶ್ರೀರಾಮ ಪ್ರೌಢಶಾಲಾ ಹಿರಿಯ ವಿದ್ಯಾರ್ಥಿ ಜಿತೇಶ್ ಆರ್. ಕೆ. ನಡೆಸಿಕೊಟ್ಟ ಜಾದೂ ಪ್ರದರ್ಶನ ಎಲ್ಲರನ್ನು ರಂಜಿಸಿತು.

ಐದನೇ ದಿನದ ಅವಧಿಗಳಲ್ಲಿ ಗೀತೆ, ಶ್ಲೋಕಗಳ ಅಭ್ಯಾಸದ ಬಳಿಕ ಮಾಸ್ಟರ್ ಕಿಶನ್ ಅಭಿನಯದ 'ಕೇರ್ ಆಫ್ ಪುಟ್‌ಪಾತ್' ಸಿನಿಮಾ




ಹಾಗೂ ಸಂಗೊಳ್ಳಿ ರಾಯಣ್ಣ ಸಿನಿಮಾಗಳನ್ನು ಶಿಬಿರಾರ್ಥಿಗಳು ವೀಕ್ಷಿಸಿದರು. ಬಳಿಕ ಶ್ರೀ ಸಿದ್ದಿವಿನಾಯಕ ಶಂಕರ ನಾರಾಯಣ ದುರ್ಗಾಂಬ ಕ್ಷೇತ್ರ ನಂದಾವರ ಹಾಗೂ ಶ್ರೀ ನಿಟಿಲಾಕ್ಷ ಸದಾಶಿವ ದೇವಸ್ಥಾನ, ನಿಟಿಲಾಪುರ ಇಲ್ಲಿನ ಐತಿಹಾಸಿಕ ಹಿನ್ನೆಲೆಯನ್ನು ಮಾತಾಜಿಗಳು ತಿಳಿಸಿಕೊಟ್ಟರು.

ಶ್ರೀರಾಮ ಪ್ರೌಢಶಾಲಾ ಶಿಕ್ಷಕ ರಾಧಾಕೃಷ್ಣ ಅಡ್ಯಂತಾಯ ನಡೆಸಿಕೊಟ್ಟ 'ಭಕ್ತ ಪ್ರಹ್ಲಾದ' ಹರಿಕಥೆಯು ಅತ್ಯುತ್ತಮವಾಗಿ ಮೂಡಿಬಂದಿತು. ಇವರಿಗೆ ಹಾರ್ಮೋನಿಯಂನಲ್ಲಿ ಶ್ರೀ ಬಾಲಕೃಷ್ಣ ಆಳ್ವ ಹಾಗೂ ತಬಲದಲ್ಲಿ ದಿನೇಶ್ ಕುಕ್ಕಿಲ ಸಹಕರಿಸಿದರು. ಶಿಬಿರದ ಕೊನೆಯ ದಿನ

ಆಯೋಜಿಸಿದ್ದ ಚಾರಣದಲ್ಲಿ ವಿದ್ಯಾರ್ಥಿಗಳು ಮುಲಾರಿನ ದುರ್ಗಾಪರಮೇಶ್ವರಿ ದೇವಸ್ಥಾನವನ್ನು ತಲುಪಿ ಅಲ್ಲಿ ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶಿವಗಿರಿ ಸತೀಶ್ ಭಟ್, ಪಟ್ಟಾಭಿರಾಮ ಟ್ರಸ್ಟ್‌ನ ಸದಸ್ಯೆ ವಿಜಯಾ ವಿ.ಪ್ರಭು ಜೊತೆಗಿದ್ದರು. ಮದ್ಯಾಹ್ನ ಶ್ರೀ ಉಮಾಶಿವ ಕ್ಷೇತ್ರ ಗೇರುಕಟ್ಟೆ ಕಲ್ಲಡ್ಕ ಇಲ್ಲಿಗೆ ತೆರಳಿ ಸಹ್ಯಾದ್ರಿ ಕಾಲೇಜಿನ ಉಪನ್ಯಾಸಕ ಶ್ರೀ ಗಿರಿಶ್ ಹೆಗಡೆ ಇವರೊಂದಿಗೆ ಸಂವಾದ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ನಡೆಸಿದರು.

**ಸಮಾರೋಪ :** ಉಮಾಶಿವ ಕ್ಷೇತ್ರದ ಗೌರವಾಧ್ಯಕ್ಷ



ಗೋಪಾಲಕೃಷ್ಣ ಭಟ್, ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷ ರಾಕೋಡಿ ಈಶ್ವರ ಭಟ್, ವ್ಯವಸ್ಥಾಪನ ಕಾರ್ಯದರ್ಶಿ ಶ್ಯಾಮ್ ಭಟ್ ಇವರ ಜೊತೆಗೆ ಸಂಸ್ಥೆಯ ಹಿರಿಯ ಸಮ್ಮುಖದಲ್ಲಿ ಶಿಬಿರದ ಸಮಾರೋಪ ನಡೆಯಿತು. ವಿದ್ಯಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಂಡರು. ಇದೇ ಸಂಧರ್ಭದಲ್ಲಿ ಭಗವದ್ಗೀತೆ ಸ್ಪರ್ಧೆಯಲ್ಲಿ ಶಾಲಾಮಟ್ಟದಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಾದ ವಾಣಿಶ್ರಿ, ಲಿಖಿತ್‌ರಾಜ್ ಹಾಗೂ ನಿವೇದಿತಾ ಇವರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

## ಪ್ರೌಢಶಾಲಾ ವಿಭಾಗ

### ಶುನಾಭ ಮತ್ತು ಕೋದಂಡ ಶಿಬಿರ 27–3–2014ರಿಂದ 4–4–2014

**27/03/2014**

ಶ್ರೀರಾಮ ಪ್ರೌಢಶಾಲೆಯ 8ನೇ ತರಗತಿಯ ಶುನಾಭ ಮತ್ತು 9ನೇ ತರಗತಿಯ ಕೋದಂಡ ಶಿಬಿರ ದಿನಾಂಕ 27/03/2014ರಿಂದ ಪ್ರಾರಂಭಗೊಂಡು 04/04/2014ರಂದು ಸಮಾಪನಗೊಂಡಿತು.

ಶಿಬಿರದ ಉದ್ಘಾಟನೆಯನ್ನು ಪುತ್ತೂರು ವಿವೇಕಾನಂದ ಬಿ.ಎಡ್ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಶೋಭಿತಾಸತೀಶ್ ದೀಪಬೆಳಗಿಸುವುದರ ಮೂಲಕ ನಡೆಸಿಕೊಟ್ಟರು. ಬಳಿಕ ಅವರು ಶಿಬಿರದ ವಿದ್ಯಾರ್ಥಿಗಳಿಗೆ ಸಂಗೀತದ ಪರಿಚಯವನ್ನು ಮಾಡಿದರು. ಹಾಡು ಹೇಳುವಾಗ ಸ್ವರದ ಏರಿಳಿತದಲ್ಲಿ ಗಮನಿಸಬೇಕಾದ ಅಂಶಗಳ ಬಗ್ಗೆ ತಿಳಿಸಿಕೊಟ್ಟರು. ಅಲ್ಲದೆ ವಿದ್ಯಾರ್ಥಿಗಳಿಗೆ ಕೆಲವು ಹಾಡುಗಳನ್ನು ಹೇಳಿಕೊಟ್ಟರು. ರಾಗಬದ್ಧವಾಗಿ ಸುಮಧುರವಾಗಿ ಸ್ಪಷ್ಟವಾದ ಉಚ್ಚಾರ ಹಾಗೂ ಏರಿಳಿತವನ್ನು ಗಮನದಲ್ಲಿಟ್ಟುಕೊಂಡೇ ಹಾಡನ್ನು ವಿದ್ಯಾರ್ಥಿಗಳಲ್ಲಿ ಹೇಳಿಸಿದರು. ಎಲ್ಲಾ ವಿದ್ಯಾರ್ಥಿಗಳು ಸಂತೋಷದಿಂದ ಹಾಡನ್ನು ಹಾಡಿ, ಸಂಗೀತದ ಕಿರುಪರಿಚಯವನ್ನು ತಿಳಿದುಕೊಂಡರು. ಬಳಿಕ ಒಂದು ಹಾಡನ್ನು ಹಾಡಿ ವಿದ್ಯಾರ್ಥಿಗಳನ್ನು ಖುಷಿ ಪಡಿಸಿದರು.

ಅಪರಾಹ್ನದ ಅವಧಿಯಲ್ಲಿ ಶಿಬಿರದ ಎಲ್ಲಾ ವಿದ್ಯಾರ್ಥಿಗಳಿಗೆ ಮುಂಬೈ ಬಾಂಬ್ ಸ್ಪೋಟ ತಾಜ್ ಹೋಟೆಲ್ ಹಾಗೂ ರೈಲ್ವೇ ನಿಲ್ದಾಣದಲ್ಲಿ ಬಾಂಬ್ ದಾಳಿ ಮಾಡಿ ಅನೇಕ ಅಮಾಯಕ ಜೀವವನ್ನು ಬಲಿ ತೆಗೆದುಕೊಂಡ ಉಗ್ರ ಕಸಬ್‌ನ ದುಷ್ಕೃತ್ಯದ ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ಉಗ್ರರು ಯಾವರೀತಿಯಲ್ಲಿ ನಮ್ಮ ದೇಶಕ್ಕೆ ನುಸುಳಿಕೊಂಡು ಬರುತ್ತಾರೆ. ಸಾಮಾನ್ಯರಂತೆ ವರ್ತಿಸಿ ಇಲ್ಲಿನ ಜನರನ್ನು ಮೋಸಗೊಳಿಸಿ ಕೊನೆಗೆ ಈ ದೇಶವನ್ನೇ ನಾಶಮಾಡುವ ರೀತಿಯನ್ನು ಬಳಿಕ ವಿವರಿಸಲಾಯಿತು.

**28/03/2014**

ಎರಡನೆ ದಿನದ ಮೊದಲನೇ ಅವಧಿಯಲ್ಲಿ ಹಿಂದಿ ಭಾಷೆಯನ್ನು ಆಧಾರವಾಗಿಟ್ಟುಕೊಂಡು ಹಿಂದಿಯಲ್ಲಿ ಮಾತನಾಡುವುದು, ಹಿಂದಿ ಭಾಷೆಯ ಕೆಲವು ಬೌದ್ಧಿಕ್ ಆಟಗಳು ಹೀಗೆ ಒಂದೂವರೆ ಗಂಟೆಯಷ್ಟು ಹಿಂದಿ ಭಾಷೆಯಲ್ಲಿಯೇ ಮಾತನಾಡಿ ಆಟಗಳನ್ನು ಆಡಿಸಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾಷೆ ಹಿಂದಿಯ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಯಿತು.

ಎರಡನೇ ಅವಧಿಯಲ್ಲಿ ವಿವಿಧ ಗುಂಪುಗಳಲ್ಲಿ ಚರ್ಚೆ ನಡೆಸಲಾಯಿತು. ಆಧುನಿಕ ಯುಗಕ್ಕೆ ಸಂಬಂಧಪಟ್ಟಂತೆ ಟಿ.ವಿ, ಮೊಬೈಲ್ ಇತ್ಯಾದಿಗಳಿಂದ ಆಗುವ ಪರಿಣಾಮ ದುಷ್ಪರಿಣಾಮಗಳ ಬಗ್ಗೆ ಚರ್ಚೆ ನಡೆಸಲಾಯಿತು. ಹಳ್ಳಿ ಜೀವನ, ನಗರ ಜೀವನ ಹೀಗೆ ಪ್ರಚಲಿತ ಕಾಲಕ್ಕೆ ಸಂಬಂಧಪಟ್ಟ ಭಾಷೆಯನ್ನು ಆಧಾರವಾಗಿಟ್ಟು ವಿದ್ಯಾರ್ಥಿಗಳು ತುಂಬಾ ಉತ್ತಮ ರೀತಿಯಲ್ಲಿ ಚರ್ಚೆ ನಡೆಸಿದರು. ಶಿಕ್ಷಕರು ಮಾರ್ಗದರ್ಶಕ ಮಾಡಿದರು.



ಮಧ್ಯಾಹ್ನ ಭೋಜನದ ಬಳಿಕ ಶ್ರೀರಾಮಕೃಷ್ಣ ಕಾಟುಕುಕ್ಕೆ ಇವರಿಂದ ದಾಸವಾಣಿ ಕಾರ್ಯಕ್ರಮ ನಡೆಯಿತು. ಇವರು ಅನೇಕ ದಾಸರ ಪದಗಳನ್ನು ಹಾಡಿ ವಿದ್ಯಾರ್ಥಿಗಳನ್ನು ಭಕ್ತಿಲೋಕಕ್ಕೆ ಕೊಂಡೊಯ್ದರು. ದಾಸರ ಪದಗಳನ್ನು ವಿದ್ಯಾರ್ಥಿಗಳಲ್ಲಿ ಹಾಡಿಸಿ ಪದದ ಒಳಗಿರುವ ದೈವತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.



**29/03/2014**



ಮೂರನೆ ದಿನ ಶ್ರೀರಾಮ ಪ್ರೌಢಶಾಲೆ ಬೆಳೆದು ಬಂದ ದಾರಿಯ ಬಗ್ಗೆ ತಿಳಿಸಲಾಯಿತು. ಪ್ರಾರಂಭವಾದ ಆ ದಿನಗಳು ಅದೊಂದು ಹೋರಾಟದ ದಿನಗಳಾಗಿತ್ತು. ಪ್ರತಿಯೊಂದು ಹಂತದಲ್ಲಿ ಶಾಲೆಯ ಪ್ರಾರಂಭಕ್ಕೆ ನಡೆಸಿದ ಹೋರಾಟವನ್ನು ಸ್ವತಃ ಅನುಭವಿಸಿದ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ॥ ಪ್ರಭಾಕರ ಭಟ್ ಎಳೆಎಳೆಯಾಗಿ ವಿವರಿಸಿದರು. ಶಾಲಾ ಪ್ರಾರಂಭಕ್ಕೆ ಸ್ಥಳೀಯ ಮತೀಯವಾದಿಗಳಿಂದ ಮತ್ತು ರಾಜಕೀಯ ಧುರಿಣರಿಂದ ಆಗಿರುವ ಅನ್ಯಾಯ ಇವರ ವಿರುದ್ಧ ನಡೆಸಿದ ಹೋರಾಟ ಹಾಗೂ ಕೊನೆಗೂ ಇದರಿಂದ ಗೆದ್ದು ಶಾಲೆ ಪ್ರಾರಂಭ ಮಾಡಿದ ಕತೆಯನ್ನು ಕೇಳಿ ವಿದ್ಯಾರ್ಥಿಗಳು ಆಶ್ಚರ್ಯಚಕಿತರಾದರು.

ಎರಡನೇ ಅವಧಿಯಲ್ಲಿ ಪ್ರತಿಭಾಶೋಧ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ಸ್ವತಃ ತಯಾರಿ ಮಾಡಿಕೊಂಡು ಬಂದಿರುವ ಕತೆ, ಕವನ, ಹಾಡು ಇತ್ಯಾದಿಗಳನ್ನು ಹೇಳಿದರು. ಅಲ್ಲದೇ ಯಾವುದೇ ಅಧ್ಯಾಪಕರ ಸಹಾಯ ಪಡೆಯದೇ ಸ್ವತಃ ತಾವೇ ನೃತ್ಯ, ನಾಟಕವನ್ನು ಅಭ್ಯಾಸ ಮಾಡಿ ವೇದಿಕೆಯಲ್ಲಿ ಪ್ರದರ್ಶಿಸಿದರು. ಸುಮಾರು 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

**01/04/2014**

9ನೇ ದೇವಶಿಲ್ಪಿ ತರಗತಿಯ ಜಿತೇಶ್ ಇವರಿಂದ ಜಾದೂ ಕಾರ್ಯಕ್ರಮ ನಡೆಯಿತು. ಬೇರೆ ಬೇರೆ ರೀತಿಯ ಕೈಚಳಕ ನಡೆಸಿ ವಿದ್ಯಾರ್ಥಿಗಳನ್ನು ಮೋಡಿ ಮಾಡಿದರು. ಇವನೊಂದಿಗೆ ಇವರ



ತಂದೆಯವರು ಸಹಕಾರ ನೀಡಿದರು. ಎರಡನೇ ಅವಧಿಯಲ್ಲಿ ಮಂಗಳೂರಿನ ರಾಜೇಶ್ ವಂದೇ ಮಾತರಂ ಗೀತೆಯ ಮಹತ್ವವನ್ನು ತಿಳಿಸಿದರು.

ಮಧ್ಯಾಹ್ನದ ನಂತರದ ಅವಧಿಯಲ್ಲಿ ವಿಟ್ಲ ಬಾಲಕೃಷ್ಣಶೆಟ್ಟಿ ಮತ್ತು ತಂಡದಿಂದ ಕೊಲೇಜ್ ಕಲೆಯನ್ನು ವಿದ್ಯಾರ್ಥಿಗಳಿಗೆ ಕಲಿಸಲಾಯಿತು. ವಿದ್ಯಾರ್ಥಿಗಳು ಗುಂಪುಗಳಲ್ಲಿ ವಿವಿಧ ರೀತಿಯ ಚಿತ್ರಕಲೆ ಕರಕುಶಲಗಳನ್ನು ಕಲಿತುಕೊಂಡರು.

**02/04/2014**

ಶಿಬಿರದಲ್ಲಿ ಚಾರಣವನ್ನು ಆಯೋಜಿಸಲಾಗಿದ್ದು, ಶುನಾಭ ಶಿಬಿರದ ವಿದ್ಯಾರ್ಥಿಗಳು ಕೊಳಕೀರು ರಸ್ತೆಯ ಮೂಲಕ ಸಂಚರಿಸಿ ಶಾಲಾಡಳಿತ ಮಂಡಳಿ ಸದಸ್ಯರಾದ ಪದ್ಮನಾಭ ಕೊಟ್ಟಾರಿರವರ ಮನೆಯಲ್ಲಿ ಬೆಳಗ್ಗಿನ ಉಪಾಹಾರ ಸೇವಿಸಿ ಬಳಿಕ ರಾಯಪ್ಪಕೋಡಿಯಲ್ಲಿ ರಸ್ತೆಯನ್ನು ದಾಟಿ ಬೆಟ್ಟದ ಕಿರಿದಾದ ದಾರಿಯಲ್ಲಿ ಹೋಗಿ ನರಹರಿ ಪರ್ವತವನ್ನು ತಲುಪಿದರು. ಮಧ್ಯದಲ್ಲಿ ವಿವಿಧ ಹಣ್ಣುಗಳನ್ನು ನೋಡಿ ತಿಂದು, ಪಕ್ಷಿಗಳ ಇಂಚರಗಳನ್ನು ಕೇಳಿ ವಿದ್ಯಾರ್ಥಿಗಳು ಖುಷಿಪಟ್ಟರು. ದೇವರ ದರ್ಶನದ ಬಳಿಕ ಭೋಜನವನ್ನು ಪ್ರಕೃತಿಯ ಮಡಿಲಲ್ಲಿ ಕುಳಿತು ಸವಿದರು. ಪರ್ವತದ ತಪ್ಪಲಲ್ಲಿ ಇರುವ ಗೋಶಾಲೆಗೆ ಭೇಟಿಯಿತ್ತು ಅಲ್ಲಿ ತಮ್ಮ ಚಾರಣದ ಅನುಭವವನ್ನು ಹಂಚಿಕೊಂಡರು.

ಕೋದಂಡ ಶಿಬಿರದ ವಿದ್ಯಾರ್ಥಿಗಳು



ಶಂಬೂರಿನ ಎ.ಎಂ.ಆರ್ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಸುದೆಕ್ಕಾರ್ ರಸ್ತೆಯ ಮೂಲಕ ನಡೆದುಕೊಂಡು ಹೋಗಿ ಅಲ್ಲಿನ ಮಾಹಿತಿಯನ್ನು ಪಡೆದುಕೊಂಡರು. ಉಪಾಹಾರವನ್ನು ಅಲ್ಲಿನ ಆಡಳಿತ ಮಂಡಳಿಯವರು ನೀಡಿದ್ದರು. ನಂತರ ಸಮೀಪದ ಸುಬ್ರಹ್ಮಣ್ಯ ದೇವಾಲಯಕ್ಕೆ ಭೇಟಿಯಿತ್ತರು. ಅಲ್ಲಿ ಸ್ಥಳೀಯ ಜನರು ಒದಗಿಸಿದ್ದ ಭೋಜನವನ್ನು ಸ್ವೀಕರಿಸಿ, ಚಾರಣದ ಅನುಭವವನ್ನು ಹಂಚಿಕೊಂಡರು.

**3.4.2014**

ಬೆಳಗ್ಗಿನ ಅವಧಿಯಲ್ಲಿ ಪ್ರತೀ ತಿಂಗಳು ನಡೆಸಿಕೊಂಡು ಬರುತ್ತಿದ್ದ ಭಜನಾ ಕಾರ್ಯಕ್ರಮದ ಸಮಾರೋಪ ಹಾಗೂ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬವನ್ನು ನಡೆಸಲಾಯಿತು. ನಂತರದ ಅವಧಿಗಳಲ್ಲಿ ವಿವಿಧ ಗುಂಪುಗಳಲ್ಲಿ ರಸಪ್ರಶ್ನಾ ಕಾರ್ಯಕ್ರಮ, ಕಲಾ



ಶಿಕ್ಷಕ ಶ್ರೀ ಜಿನ್ನಪ್ಪ ಮತ್ತು ಯೋಗ ಶಿಕ್ಷಕ ಶ್ರೀ ರಾಜೇಶ್‌ರವರು ಚಿತ್ರಕಲೆ ಮತ್ತು ಕ್ಲೇಮಾಡೆಲಿಂಗ್ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**4.4.2014**

ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪ್ರಭು ಅಮ್ಮೂರು, ಕಾರ್ಯದರ್ಶಿ ಮುತ್ತಪ್ಪ ಮೂಲ್ಯ ಹಾಗೂ ಸದಸ್ಯರು ಪ್ರೌಢಶಾಲಾ ಹಿರಿಯ ಅಧ್ಯಾಪಕರು ಶ್ರೀ ರಮೇಶ್ ಎನ್ ಉಪಸ್ಥಿತರಿದ್ದರು. ಶಿಬಿರದಲ್ಲಿ ತಾವು ಕಲಿತ ಹಾಡು, ನೃತ್ಯ, ನಾಟಕ, ಕತೆ,



ಕವನಗಳನ್ನು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಶುನಾಭ ಹಾಗೂ ಕೋದಂಡ ಎರಡೂ ಶಿಬಿರಗಳು ಅತ್ಯಂತ ಸ್ಫೂರ್ತಿದಾಯಕವಾಗಿ ಮೂಡಿಬಂದಿದೆ. ಇಂತಹ ಶಿಬಿರಗಳು ಮತ್ತೆಮತ್ತೆ ಆಯೋಜಿಸಲ್ಪಡಲಿ ಎಂದು ಶಿಬಿರಾರ್ಥಿಗಳು ಅಭಿಪ್ರಾಯಪಟ್ಟರು.

ಕಳೆದು ಹೋದ ಸಮಯವನ್ನು ಮತ್ತೆ ಹೊಂದಿಸಿಕೊಳ್ಳಲು ಸಾಧ್ಯವಿಲ್ಲ ಪ್ರತೀ ಗಳಿಗೆಯು ಬಹಳ ಮಹತ್ವದ್ದಾಗಿರುತ್ತದೆ. ಹೀಗಾಗಿ ರಜಾ ದಿವಸಗಳಲ್ಲಿ ಆಯೋಜಿಸಿರುವ ಇಂತಹ ಶಿಬಿರಗಳ ಪ್ರಯೋಜನಗಳನ್ನು ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂದು ಅತಿಥಿಗಳು ಅಭಿಪ್ರಾಯಪಟ್ಟರು.

## ಪದವಿ ವಿಭಾಗ




### ದೀಪಪ್ರದಾನ : 10–4–2014

ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ "ದೀಪ ಪ್ರದಾನ" ಕಾರ್ಯಕ್ರಮವನ್ನು ಉದ್ದೇಶಿಸಿ ಸಂಸ್ಥೆಯ ಸಂಚಾಲಕ ಡಾ. ಪ್ರಭಾಕರ್ ಭಟ್ ಮಾತನಾಡಿ, 'ಶೈಕ್ಷಣಿಕ ಪಠ್ಯದ ಪಾಠ ಕ್ರಮ ಮಾಹಿತಿಯನ್ನು ಮಾತ್ರ ನೀಡಬಲ್ಲದು. ಆದರೆ ಅದರೊಂದಿಗೆ ಲೋಕಾನುಭವ ಪಡೆದಾಗ ನಮ್ಮ ದೃಷ್ಟಿ ವಿಸ್ತಾರವಾಗಬಲ್ಲದು. ಅದಕ್ಕಾಗಿ ಸ್ವಾಭಿಮಾನಿ, ಸ್ವದೇಶೀ ಭಾವವನ್ನು ಮೂಡಿಸುವ ಶಿಕ್ಷಣ ಇಂದಿನ ಅಗತ್ಯ. ಅಂತಹ ಶಿಕ್ಷಣವನ್ನು ಇಲ್ಲಿ ನೀಡುವ ಪ್ರಯತ್ನಮಾಡಿದ್ದೇವೆ. ಮುಂದಿನ ದಿನಗಳಲ್ಲಿ ನೀವುಗಳು ಇಲ್ಲಿನ ನೈಜ ರಾಯಭಾರಿಗಳಾಗಿ ಎಲ್ಲರಿಗೂ ಶುಭವಾಗಲಿ' ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಸಮಾಜ ಕಾರ್ಯಕ್ಕೆ ಸಿದ್ಧನಾಗಿ ಸಮಯ ನೀಡುವ ಸಂಕಲ್ಪಮಾಡಿದ ತೃತೀಯ ಬಿ.ಕಾಂ. ವಿದ್ಯಾರ್ಥಿ ಪ್ರಶಾಂತ ಇವನನ್ನು ಅಭಿನಂದಿಸಿ, ಆಶೀರ್ವದಿಸಿದರು

ಮುಖ್ಯ ಅತಿಥಿಗಳಾಗಿ ಉದ್ಯಮಿ ಪದ್ಮನಾಭ ಪೂಜಾರಿ ಮಾತನಾಡಿ 'ಇಂದು ಅವಕಾಶಗಳು ವಿಪುಲವಾಗಿದೆ. ಕಲಿಯಲು ಬೇಕಾದ ಕ್ಷೇತ್ರವೂ ವಿಸ್ತಾರವಾಗಿದೆ. ಅದನ್ನು ಸರಿಯಾಗಿ ಬಳಸಿಕೊಂಡು ಜೀವನದಲ್ಲಿ ಉನ್ನತಿಯನ್ನು ಸಾಧಿಸುವುದು ಬಹಳ ಮುಖ್ಯ' ಎಂದರು.

### ವಿಶೇಷ ತರಗತಿ

ದ್ವಿತೀಯ ಪಿಯುಸಿಗೆ ತೇರ್ಗಡೆಗೊಂಡ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಗಣಕ ವಿಜ್ಞಾನ, ರಸಾಯನ ಶಾಸ್ತ್ರ, ಭೌತ ಶಾಸ್ತ್ರ ಹಾಗೂ ಜೀವಶಾಸ್ತ್ರ ವಿಷಯಗಳಿಗೆ ವಿಶೇಷ ತರಗತಿಗಳನ್ನು ಆಯೋಜಿಸಲಾಗಿದೆ. ಪರಿಣತ ಉಪನ್ಯಾಸಕರು 40 ದಿವಸಗಳ ಈ ವಿಶೇಷ ತರಗತಿಯನ್ನು ನಡೆಸಿಕೊಡುತ್ತಿದ್ದಾರೆ.

### ವಸತಿನಿಲಯಕ್ಕೆ ಪ್ರವೇಶ ಪರೀಕ್ಷೆ

ದಿನಾಂಕ 20–04–2014ರಂದು ಶ್ರೀರಾಮ ವಸತಿನಿಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳಿಗಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿದ್ದು ಹಲವು ಜಿಲ್ಲೆ ರಾಜ್ಯಗಳಿಂದ ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾರಾಯಣ ಸೋಮಯಾಜಿ ವಹಿಸಿದ್ದರು.

ಅಂತಿಮ ವಿಭಾಗದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಂದರ್ಭದಲ್ಲಿ ತಿಲಕಧಾರಣೆ ಮಾಡಿ ದೀಪ ಉರಿಸುವುದರ ಮೂಲಕ ಬೀಳ್ಕೊಡಲಾಯಿತು.




ಅಂತಿಮ ವಿಭಾಗದ ವಿದ್ಯಾರ್ಥಿಗಳು ಊಟದ ಪಾತ್ರೆಗಳನ್ನು ಕಾಲೇಜಿಗೆ ಕೊಡುಗೆ ಇತ್ತರು.

ಅಂತಿಮ ವಿಭಾಗದ ವಿದ್ಯಾರ್ಥಿಗಳು




ದ್ವಿತೀಯ ವಿಭಾಗದ ವಿದ್ಯಾರ್ಥಿಗಳಿಗೆ ದೀಪ ಪ್ರದಾನ ಮಾಡುವ ಮೂಲಕ ಜವಾಬ್ದಾರಿಯನ್ನು ಹಸ್ತಾಂತರಿಸಿದರು. ಇದೇ ಸಂದರ್ಭದಲ್ಲಿ ಅಂತಿಮ ವಿಭಾಗದ ವಿದ್ಯಾರ್ಥಿಗಳು ತಾವಾಗಿಯೇ ಸಂಗ್ರಹಿಸಿದ ನಿಧಿಯನ್ನು ಸಂಚಾಲಕರಿಗೆ ಹಸ್ತಾಂತರಿಸಿದರು.

ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ಉದಯ, ನಿವೇದಿತಾ, ಅವಿನಾಶ್, ಮಾನಸ ಹಾಗೂ ಅಂತಿಮ ವಿಭಾಗದ ವಿದ್ಯಾರ್ಥಿಗಳಾದ ಪ್ರಶಾಂತ್ ಕೆ, ರಶ್ಮಿಕುಮಾರಿ, ಲೋಹಿತ್, ಲಾವಣ್ಯ



ಸಂದೇಶ್, ಅನುಷಾ, ರವಿಕಿರಣ್, ಪ್ರವೀಣ್, ಪ್ರಶಾಂತ್ ಪಲ್ಲಮಜಲು ತಮ್ಮ ಅನಿಸಿಕೆ ಅಭಿಪ್ರಾಯ ವ್ಯಕ್ತಪಡಿಸಿದರು. 2012–13 ಸಾಲಿನಲ್ಲಿ ಪದವಿಪೂರ್ವ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ನಯನಾ(ವಿಜ್ಞಾನ), ರಾಜಗೋಪಾಲ(ವಾಣಿಜ್ಯ), ಭವ್ಯಶ್ರೀ (ಕಲಾ) ಇವರನ್ನು ಅಭಿನಂದಿಸಲಾಯಿತು. ವೇದಿಕೆಯಲ್ಲಿ ಡಾ. ಕಮಲಾ ಪ್ರಭಾಕರ್, ಶ್ರುತಿ ಸುಕೇಶ್ ಕೊಟ್ಟಾರಿ ಉಪಸ್ಥಿತರಿದ್ದರು. ಕೃಷ್ಣಪ್ರಸಾದ್ ಸ್ವಾಗತಿಸಿ, ಪವಿತ್ರಾ ವಂದಿಸಿ, ಭಾಗ್ಯಶ್ರೀ ನಿರೂಪಿಸಿದರು.

## ರಾಮಧ್ವನಿ ಬಿಡುಗಡೆ :




ವಿದ್ಯಾರ್ಥಿಗಳ ಲೇಖನ, ಕಥೆ ಮತ್ತು ಕವನಗಳು, ಸಂಘಗಳ ಮೂಲಕ ನಡೆಸಿದ ಚಟುವಟಿಕೆಗಳ ಸಮಗ್ರ ವಿವರಗಳನ್ನು ಒಳಗೊಂಡ ವಾರ್ಷಿಕ ವಿಶೇಷ ಸಂಚಿಕೆ ರಾಮಧ್ವನಿಯನ್ನು ದೀಪಪ್ರದಾನದ ದಿನ ಅತಿಥಿಗಳಾದ ಡಾ। ಸುಕೇಶ್ ಕೊಟ್ಟಾರಿ ಬಿಡುಗಡೆಗೊಳಿಸಿದರು.

## ಕಾಮರ್ಸ್ ಫೆಸ್ಟ್ 4–4–2014

ವಾಣಿಜ್ಯ ಸಂಘದ ವತಿಯಿಂದ ನಡೆದ ಕಾಮರ್ಸ್ ಫೆಸ್ಟ್ ಕಾರ್ಯಕ್ರಮದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಮಾರ್ಕೆಟಿಂಗ್, ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸಿನ ನಿರ್ವಹಣೆ, ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿನ ಉದ್ಯೋಗಾಧಿಕಾರಿ ಶ್ರೀ ವಿವೇಕ್ ಭಂಡಾರಿ, ಕಾವೂರು ಪ್ರಥಮದರ್ಜೆ ಕಾಲೇಜಿನ ಉಪನ್ಯಾಸಕ ಶ್ರೀ ಯತಿನ್, ಉಪನ್ಯಾಸಕಿ




ಕವಿತಾ, ಉಜಿರೆ ಪ್ರಥಮದರ್ಜೆ ಕಾಲೇಜಿನ ಉಪನ್ಯಾಸಕ ಶರತ್‌ಚಂದ್ರ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನವನ್ನು ವಿತರಿಸಲಾಯಿತು.

ನಿಮ್ಮ ವಿದ್ಯಾರ್ಥಿ ಜೀವನದ **ಶುಭಾರಂಭ**
**ಇಲ್ಲೇ ಯಾಕಾಗಬಾರದು ?**

ಸಾಮರ್ಥ್ಯದ **ಉನ್ನತಿ**
ಪ್ರತಿಭೆಯ **ಉದಯ**

- ಶ್ರೀರಾಮ ಶಿಶುಮಂದಿರ
- ಶ್ರೀರಾಮ ಪ್ರಾಥಮಿಕ ಶಾಲೆ
- ಶ್ರೀರಾಮ ಪ್ರೌಢಶಾಲೆ
- ಶ್ರೀರಾಮ ಪದವಿಪೂರ್ವ ವಿದ್ಯಾಲಯ
- ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯ
- ಶ್ರೀರಾಮ ವಸತಿನಿಲಯ

ದಾಖಲಾತಿ ಪ್ರಾರಂಭಗೊಂಡಿದೆ



Sarayu Kannada Monthly Edited and Published by Narayana Somayaji on behalf of Sri Rama Vidyakendra Kalladka, Bantwal Tq, D.K. and printed at Anagha Digital Square, Kaikamba, B.C. Road.

SRI RAMA VIDYAKENDRA TRUST (R.)
HANUMAN NAGAR, KALLADKA
BANTWAL TQ., DAKSHINA KANNADA, KARNATAKA 574 222
Ph.: 08255-275273 / 275183 / 275073 / 275693 / 279673 / 200085 / 279479
Website : **www.srvk.org** E-mail : **info@srvk.org**

BOOK POST

ಸವಿಧೇ,